ಮಲ್ಲನಗೌಡ ಸಿ. ಪಾಟೀಲ, ರಂಭಾಪುರಿ

*ಸದಾನಂದಗೌಡರು ಅಳಬೇಕು, ದೇವೇಗೌಡರು ನಗಬೇಕು. ಅದಕ್ಕಾಗಿ ಏನು ಮಾಡಬೇಕು?*




ಕ್ರಮವಾಗಿ ಗ್ಲಿಸರಿನ್ ಮತ್ತು ನೈಟ್ರಸ್ ಆಕ್ಸೈಡ್ ಬಳಸಿ ನೋಡಿ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಬಿಳಿ ಸಮವಸ್ತ್ರ ಧರಿಸುವವರ ಭಾವನೆ ಹೇಗಿರಬೇಕು?*

ಸಂಭಾವನೆಗೆ ಭಾವನೆ ಬಲಿಯಾಗದಂತೆ!

ಡಿ.ಎಲ್. ನಾಗರಾಜ್, ಚನ್ನಗಿರಿ

*ಹೊಟೆಲ್‌ಗಳಲ್ಲಿ ಬ್ರಾಹ್ಮಣರು ಅನ್ಯ ಜಾತಿಯವರೊಂದಿಗೆ (ಮಾಂಸಾಹಾರಿಗಳೊಂದಿಗೆ) ಊಟ ಮಾಡುವುದು ಸಹಪಂಕ್ತಿ ಭೋಜನವಾಗುವುದಿಲ್ಲವೆ?*

ದಂತಪಂಕ್ತಿ ಬೇರೆಯಾದ್ದರಿಂದ ಸಹಪಂಕ್ತಿಯಾದರೂ ತೊಂದರೆ ಇಲ್ಲವಂತೆ!

ಪಿ.ಜೆ.ರಾಘವೇಂದ್ರ, ಮೈಸೂರು

*ತ್ರೇತಾಯುಗದೊಳ್ ವನವಾಸ, ದ್ವಾಪರದೊಳ್ ಅಜ್ಞಾತವಾಸ. ಆದರೆ, ಕಲಿಯುಗದೊಳೇಕೆ ಸೆರೆವಾಸ?*



ಸೆರೆಯಲ್ಲೇ ಮುಳುಗಿ ತೇಲುವವರಿಗೆ ಸೆರೆವಾಸವೇ ಸರಿ!

ಎಂ.ಸಿ. ಅರುಣ್ ಕುಮಾರ್, ಮೈಸೂರು

*ಫಾಸ್ಟ್ ಫುಡ್ ಕೇಳಿದ್ದೇನೆ, ಸ್ಲೋ ಪಾಯ್ಸನ್ ಕೇಳಿದ್ದೇನೆ. ಹಾಗಾದರೆ ಮೀಡಿಯಮ್ ಯಾವುದು?*

ಇಂಗ್ಲಿಷ್!

ವಿ. ಹಮೀದ್. ವಿಟ್ಲ

*ಮನಸ್ಸಿನ ಬೇನೆಯನ್ನು ನಿವಾರಿಸುವ ಬಗೆ ಹೇಗೆ?*

ಯೋಚನೆಯ ಚಾನಲ್ ಬದಲಾಯಿಸಿ, ಸೂಚನೆಯ ಪ್ರೋಗ್ರಾಂ ದೊರಕುತ್ತದೆ!

ಎಂ.ಕೆ. ರಾಜೇಶ್, ಚಾಮರಾಜನಗರ

*ಹೆಚ್ಚು ಹೆಚ್ಚು ಮಾತನಾಡಿದರೆ ನಾಲಿಗೆ ಸವೆಯುವ ಹಾಗಿದ್ದರೆ?*

ಕ್ರಿಕೆಟ್, ಫುಟ್ಬಾಲ್ ಕಾಮೆಂಟ್ರಿಗೆ ಜನರೇ ಸಿಗುತ್ತಿರಲಿಲ್ಲ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಪ್ರಾಣಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠ ಪ್ರಾಣಿ ಯಾವುದು?*

ಬುದ್ಧಿ ಕಡಿಮೆ, ಆಸ್ತಿ ಜಾಸ್ತಿ ಇರುವ ಮಾವ!

ಹೇಮಾವತಿ ಜೈನ್, ಹೂವಿನಹಡಗಲಿ

*ನಿಮ್ಮ ಮೊದಲ ಆಯ್ಕೆ ಮತ್ತು ಕೊನೆಯ ಆಯ್ಕೆ ಯಾವುದು ಸಾರ್?*

ಮೊದಲ ಆಯ್ಕೆ ಹುಟ್ಟು, ಕೊನೆಯದು ಸಾವು. ನಿಮ್ಮದು?

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಮಹಾಭಾರತದ ಯಕ್ಷ ಪ್ರಶ್ನೆಗೂ, ನಾವು ನಿಮಗೆ ಕೇಳುವ ಪ್ರಶ್ನೆಗೂ ಏನು ವ್ಯತ್ಯಾಸ?*

ಯಕ್ಷನಿಗೆ ಉತ್ತರ ಮೊದಲೇ ಗೊತ್ತಿತ್ತು!

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

*ಚಲನಚಿತ್ರ ನಟಿಯರು ಮದುವೆಯಾದ ವರನ್ನೇ ಮದುವೆಯಾಗುವುದೇಕೆ?*

ಸಂಸಾರ ಮೊದಲನೆಯ ಹೆಂಡತಿಗೆ, ಸಾರ ಇವರಿಗೆ ಇರಲೆಂದು!

ಅಮರಯ್ಯ ಪತ್ರಿಮಠ, ಶೋರಾಪೂರ

*ಪ್ರೀತಿಗೂ, ಮೋಹಕ್ಕೂ ಇರುವ ಅಂತರ?*

ಒಂದೇ ಗೇಣು. ಕಣ್ಣಿನಿಂದ ಮೋಹ, ಹೃದಯದಿಂದ ಪ್ರೀತಿ!

ಹಾಡ್ಯ ಜಯಾನಂದ, ಮೈಸೂರು

*ಮನದರಸಿಗೂ, ಮನೆಯೊಡತಿಗೂ ಏನು ವ್ಯತ್ಯಾಸ?*

ಮನದರಸಿಗೆ ಇವನು ಗಂಡ, ಮನೆಯೊಡತಿಗೆ ಮಗ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಕಂಡವರ ಹಣದಲ್ಲಿ ಮಜ ಉಡಾಯಿಸುವ ಮಂದಿಗೆ ನೀವು ಏನು ಹೇಳುವಿರಿ ಗುರು?*

ಮಜಾದ ಮತ್ತನ್ನು ಅನುಭವಿಸಿದವರಿಗೆ ಸಜಾದ ಕುತ್ತು ಉಚಿತ!

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು

*ದೇವರ ಜೊತೆ ಮೊಬೈಲ್‌ನಲ್ಲಿ ಮಾತನಾಡುವಂತಿದ್ದರೆ ಹೇಗಿರುತ್ತಿತ್ತು?*

ಇವಿಷ್ಟನ್ನೇ ಜೀವಮಾನವಿಡೀ ಕೇಳಿಸಕೊಳ್ಳಬೇಕಾಗುತ್ತಿತ್ತು– ನೀವು ಸಂಪರ್ಕಿಸಲು ಪ್ರಯತ್ನಿಸುತ್ತಿರುವ ದೇವರು ಬಿಝಿಯಾಗಿದ್ದಾರೆ; ದಯವಿಟ್ಟು ಸ್ವಲ್ಪ ವರ್ಷಗಳ ನಂತರ ಪ್ರಯತ್ನಿಸಿ !

ಜಯದೇವ ಹಲಕಿ, ಗೋಕಾಕ

*ಯಡ್ಡಿ ಸರಕಾರಕ್ಕೂ, ಗೌಡರ ಸರಕಾರಕ್ಕೂ ಏನು ವ್ಯತ್ಯಾಸ?*

ಮೊದಲು ಕಾಂಗ್ರೆಸ್ ಕೊಳಕೆಂದೆವು, ನಂತರ ಜೆಡಿಎಸ್ ಕಚಡಾ ಎಂದೆವು; ಆದರೆ ಎಡ್ಡಿಗೆ ಹೋಲಿಸಿದರೆ ಅವು ರಾಮರಾಜ್ಯ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಕಾಯಿಸುವ ಹುಡುಗಿಯರನ್ನು ಯಾರೂ ಪ್ರೀತಿಸಬಾರದಂತೆ, ಏಕಿರಬಹುದು?*

ಹಾಲು, ದನ, ದ್ವಾರ, ಬುರುಡೆ– ಇವುಗಳಲ್ಲಿ ಯಾವುದನ್ನು ಕಾಯಿಸುವ ಹುಡುಗಿಯರನ್ನು ಪ್ರೀತಿಸಬಾರದಂತೆ?

ಕುಮಾರ ಚಲವಾದಿ, ಹೊಳೆನರಸೀಪುರ

*ಒಲಿದುಬಂದ ಹೆಣ್ಣಿನ ಮೂಗನ್ನೇ ಕತ್ತರಿಸಿದ ಲಕ್ಷ್ಮಣನಂತಹವರು ಈಗ ಎಲ್ಲಿದ್ದಾರೆ?*




ನರ್ಸಿಂಗ್ ಹೋಂಗಳಲ್ಲಿ ರೈನೋಪ್ಲಾಸ್ಟಿ (ಮೂಗಿನ ಪ್ಲಾಸ್ಟಿಕ್ ಸರ್ಜರಿ) ಮಾಡುವ ವೈದ್ಯರಾಗಿದ್ದಾರೆ!

ಸವಿರವಿ, ಬಾಳೆಹೊನ್ನೂರು

*ಮನುಷ್ಯನಿಗೆ ತನ್ನ ಮರಣ ಯಾವಾಗ ಮತ್ತು ಹೇಗೆ ಎಂದು ಗೊತ್ತಾಗುವ ಹಾಗಿದ್ದರೆ...?*

ಅಂತಹ ವೈದ್ಯರು, ಅಂತಹ ನರ್ಸಿಂಗ್ ಹೋಂಗಳಿಂದ ದೂರವಿರಬಹುದು!

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ

*ಮಾಜಿ ಮುಖ್ಯಮಂತ್ರಿಗಳು ಇತ್ತೀಚೆಗೆ ಯು ಟರ್ನ್ ತೆಗೆದುಕೊಳ್ಳುತ್ತಿರುವುದರ ಮರ್ಮವೇನು?*

ಮುಂದೆ ರೋಡ್ ಬ್ಲಾಕ್ ಆಗಿದೆಯಂತೆ!

■ ರಾಮ್